INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -6, November-December, 2025
Page No,33-41
Peer -Reviewed, Refereed Journal

# ಕೋಲಾರ ಜಿಲ್ಲೆಯ ಜನಪರ ಚಳವಳಿಗಳ ಕುರಿತ ವಿಶ್ಲೇಷಣೆ

ಡಾ.ಇಂದಿರಮ್ಮ.[1]

**ಕೋ**ಲಾರ ಜಿಲ್ಲೆಯು ಕರ್ನಾಟಕದ ಪ್ರಾಚೀನ ಸಾಂಸ್ಕೃತಿಕ ವಲಯಗಳಲ್ಲಿ ಒಂದು ಪ್ರಮುಖ ಸ್ಥಾನವನ್ನು ಹೊಂದಿದೆ. ಇಲ್ಲಿನ ಸಾಮಾಜಿಕ ವ್ಯತ್ಯಾಸಗಳ ವಿರುದ್ಧದ ಪ್ರತಿರೋಧ, ದುರ್ಬಲ ವರ್ಗಗಳ ಪರ ಹೋರಾಟ ಹಾಗೂ ಸಮುದಾಯ ಆಧಾರಿತ ನಿರ್ಣಯ ವ್ಯವಸ್ಥೆಗಳು ಬೆಳೆಯಲು ನೆಲಬಿದ್ದಿತು. ಕೋಲಾರದಲ್ಲಿ 19-20ನೆಯ ಶತಮಾನಗಳಲ್ಲಿ ನಡೆದ ರೈತರ ಹಕ್ಕುಗಳ ರಕ್ಷಣೆಗೆ ನಡೆದ ಹೋರಾಟಗಳು, ಭಾಷಾ ಮತ್ತು ಸಂಸ್ಕೃತಿಯ ಪರವಾಗಿ ನಡೆದ ಕನ್ನಡಪರ ಚಳವಳಿಗಳು, ಸಮಾಜದ ಅತೀ ದುರ್ಬಲ ವರ್ಗಗಳ ಸ್ವಾಭಿಮಾನವನ್ನು ಬೆಳೆಯಿಸಿದ ದಲಿತ ಚಳವಳಿಗಳು ಹಾಗೂ ಮಹಿಳೆಯರ ಶಿಕ್ಷಣ, ಆರ್ಥಿಕ ಮತ್ತು ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದ ಪ್ರಯತ್ನಗಳು ಇವು ಜಿಲ್ಲೆಯ ಜನಪರ ಚಿಂತನೆಗಳಿಗೆ ಬಲಪೂರಿತವಾದ ಅಡಿಪಾಯವನ್ನು ಒದಗಿಸಿವೆ. ಬದಲಾದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ನಡುವೆ ಕಾರ್ಮಿಕರ ಕಲ್ಯಾಣ, ವೇತನ, ಸುರಕ್ಷತೆ ಮತ್ತು ಮಾನವ ಹಕ್ಕುಗಳ ಬೇಡಿಕೆಗಳ ಸುತ್ತ ನಿರ್ಮಾಣವಾದ ಕಾರ್ಮಿಕ ಸಂಘಟನೆಗಳು, ಕೋಲಾರ್ ಗೋಲ್ಡ್ ಫೀಲ್ಡ್ ಪ್ರದೇಶದ ಕಾರ್ಮಿಕ ಹೋರಾಟಗಳು, ಕನ್ನಡ ದೇಶದ ಕಾರ್ಮಿಕ ಚಳವಳಿಗಳ ಇತಿಹಾಸದಲ್ಲಿ ಮಹತ್ವದ ಅಧ್ಯಾಯವಾಗಿ ಪರಿಚಿತವಾಗಿವೆ. ಇವುಗಳು ಜನಪರ ರಾಜಕೀಯ ಪ್ರಯೋಗ ಮತ್ತು ಸಾಮಾಜಿಕ ಪರಿವರ್ತನೆಯ ಕ್ರಿಯಾಶೀಲ ಕೇಂದ್ರವಾಗಿ ರೂಪುಗೊಂಡಿತು. ಇಲ್ಲಿ ನಡೆದ ಹೋರಾಟಗಳು ಮತ್ತು ಚಳವಳಿಗಳು ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕೆ ಮಾತ್ರ ಸೀಮಿತವಾಗಿರದೆ, ಕರ್ನಾಟಕದ ವಿಶಾಲ ಸಮಾಜಪರ ಮತ್ತು ಪ್ರಗತಿಪರ ಚಳವಳಿಗಳಿಗೆ ವೈಚಾರಿಕ ಸಂಘಟನೆ ತಳಹದಿಯನ್ನು ಮಾಡಿದವು. ಈ ಜಾಗೃತಿಯ ಪರಂಪರೆಯು ಕೋಲಾರ ಜಿಲ್ಲೆಯ ಇತಿಹಾಸವನ್ನು ಕೇವಲ ಭೌಗೋಳಿಕ ನಕ್ಷೆಯಲ್ಲಿ ಗುರುತಿಸುವುದಕ್ಕಿಂತ ಹೆಚ್ಚಾಗಿ ಜನಪರ ಪ್ರತಿಭಟನೆಗಳು,

[1].ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಲಾರ.

ನಾಗರಿಕ ಸಮಾಜದ ಸಕ್ರಿಯತೆ ಮತ್ತು ಸಮಾನತೆಯಾದ ಸಮಾಜ ನಿರ್ಮಾಣದ ಹೋರಾಟಗಳ ಇತಿಹಾಸವಾಗಿ ವಿವರಿಸುತ್ತದೆ.

**ಕಾರ್ಮಿಕ ಚಳವಳಿ**

ಕೋಲಾರ್ ಗೋಲ್ಡ್ ಫೀಲ್ಡ್ ಪ್ರದೇಶವು 1890ರ ದಶಕದಿಂದ ಏಷ್ಯಾದ ಅತಿ ದೊಡ್ಡ ಮತ್ತು ತಾಂತ್ರಿಕವಾಗಿ ಅತ್ಯಾಧುನಿಕ ಚಿನ್ನದ ಗಣಿಗಾರಿಕಾ ಕೇಂದ್ರವಾಗಿ ಬೆಳೆಯಿತು. ಕೊರಮಂಡಲ್ ಗೋಲ್ಡ್ ಮೈನ್ ಕಂ, ಮೈಸೂರಿನ ಚಿನ್ನದ ಗಣಿಗಾರಿಕಾ ಸಂಸ್ಥೆಗಳು ಮತ್ತು ಅನಂತರದ ಬ್ರಿಟಿಷ್ ಆಡಳಿತದ ನೇರ ಮೇಲ್ವಿಚಾರಣೆಯಡಿ ಕಾರ್ಯನಿರ್ವಹಿಸಿದ ಈ ಗಣಿಗಳು, ಭಾರತದಲ್ಲಿ ಉದ್ಯಮಿಕ ಕಾರ್ಮಿಕ ವರ್ಗದ ಪ್ರಾರಂಭಿಕ ರೂಪಗೊಳಿಸುವಿಕೆಯ ಪ್ರಮುಖ ಕ್ಷೇತ್ರವೆಂದು ಪರಿಗಣಿಸಲಾಗಿದೆ. ಸ್ಥಳೀಯ ಕನ್ನಡಿಗರ ಜೊತೆಗೂಡಿ ತಮಿಳುನಾಡು, ಆಂಧ್ರಪ್ರದೇಶ, ತೆಲುಗು ಪ್ರದೇಶಗಳು, ಒಡಿಶಾ, ಬಿಹಾರ ಮತ್ತು ಉತ್ತರ ಭಾರತದ ಹಲವು ಭಾಗಗಳಿಂದ ಸಾವಿರಾರು ಕಾರ್ಮಿಕರು ಇಲ್ಲಿ ಉದ್ಯೋಗಕ್ಕಾಗಿ ವಲಸೆ ಬಂದರು. ಈ ಸಂಸ್ಕೃತಿಗಳ ಮಿಶ್ರಣದಲ್ಲಿ ಇಲ್ಲಿನ ವಿಶಿಷ್ಟವಾದ ಬಹುಭಾಷಾ, ಬಹುಸಾಂಸ್ಕೃತಿಕ ಕಾರ್ಮಿಕ ಸಮುದಾಯವಾಗಿ ರೂಪುಗೊಂಡಿತು. ಗಣಿಗಾರಿಕೆಯ ಕಠಿಣ ಸ್ವರೂಪದಿಂದ ಕಾರ್ಮಿಕರು ಮತ್ತು ಅವರ ಕುಟುಂಬಗಳು ವಸತಿ ಸಾಲುಗಳು ಎಂಬ ನಿರ್ದಿಷ್ಟ ಪ್ರದೇಶಗಳಲ್ಲಿ ನೆಲೆಸಿದವು. ಈ ವಲಸೆ ಮತ್ತು ವಸತಿ ಸಂಯೋಜನೆ ಸಮೂಹ ಪ್ರಜ್ಞೆ ಮತ್ತು ಸಂಘಟನೆ ಚಟುವಟಿಕೆಗಳಿಗೆ ಅನಿವಾರ್ಯವಾದ ಸಾಮಾಜಿಕ ಆಧಾರವನ್ನು ನಿರ್ಮಿಸಿತು.

ಕೆಲಸದ ಸ್ಥಿತಿಗಳು ಬ್ರಿಟಿಷ್ ಕೈಗಾರಿಕಾ ಕೇಂದ್ರಗಳಷ್ಟೇ ಅಪಾಯಕಾರಿ ಮತ್ತು ಅನ್ಯಾಯಪೂರ್ಣವಾಗಿದ್ದು, ಅನೇಕ ದಾಖಲೆಗಳು ಈ ಭಾಗದಲ್ಲಿ ಉದ್ಯೋಗದ ಸ್ವರೂಪ ಎಷ್ಟು ಕಠಿಣವಾಗಿತ್ತೆಂಬುದನ್ನು ತೋರಿಸುತ್ತವೆ. ಗಣಿಗಳ ಆಳ 2-3 ಕಿಮೀಗಳಿಗೆ ಇಳಿಯುತ್ತಿದ್ದರಿಂದ, ಹೆಚ್ಚಿನ ತಾಪ, ಆಮ್ಲಜನಕದ ಕೊರತೆ ಮತ್ತು ವಿಷಕಾರಿ ಅನಿಲಗಳ ಸಮಸ್ಯೆ ಸದಾ ಇತ್ತು. 8-12 ಗಂಟೆಗಳ ಶಿಫ್ಟ್, ಕಲ್ಲುಸ್ಫೋಟಗಳ ಅಪಾಯ, ಯಂತ್ರಸಾವಿನ ಪ್ರಮಾಣ ಮತ್ತು ರಕ್ಷಣಾ ಸಾಧನಗಳ ಕೊರತೆ ಕಾರ್ಮಿಕರ ಜೀವಿತಕ್ಕೆ ನಿರಂತರ ಬೆದರಿಕೆಯಾಯಿತು. ವೇತನವು ಕುಸಿತಮಟ್ಟದಲ್ಲಿದ್ದು, ಕುಟುಂಬಗಳಿಗೆ ನೀಡಲ್ಪಟ್ಟ ವಸತಿ–ವೈದ್ಯಕೀಯ ಸೌಲಭ್ಯಗಳು ಅತ್ಯಂತ ನಗಣ್ಯ ಮಟ್ಟದಲ್ಲಿದ್ದವು. ಈ ಪರಿಸ್ಥಿತಿಗಳು ನಿಧಾನವಾಗಿ ಕಾರ್ಮಿಕರಲ್ಲಿ ಹಕ್ಕು-ಜಾಗೃತಿ, "ಜೀವಿತ-ಶರತ್ತುಗಳ ಸುಧಾರಣೆ"ಗೆ ಬೇಡಿಕೆ ಮತ್ತು ಸಂಘಟಿತ ಹೋರಾಟಗಳ ಅವಶ್ಯಕತೆ ಉಂಟುಮಾಡಿದವು. ಕೈಗಾರಿಕಾ ಶಿಕ್ಷಣ ಮತ್ತು ಮಿಷನರಿ ಶಾಲೆಗಳ ಮೂಲಕ ಸಾಕ್ಷರತೆ ಹೆಚ್ಚಾದುದು ವಿಜ್ಞಾನ ತಂತ್ರಜ್ಞಾನ ಪಾಠ ಪಡೆದ ಗಣಿಕಾರರು ತಮ್ಮ ಹಕ್ಕುಗಳ ಅರಿವಿನತ್ತ ಮುಖಮಾಡಿದರು. ವಸತಿ ಸಾಲುಗಳಲ್ಲಿದ್ದ ಗುಂಪು ಜೀವನ ಒಂದೇ ಪ್ರದೇಶದಲ್ಲಿ ಸಾವಿರಾರು

ಕಾರ್ಮಿಕರು ವಾಸಿಸುವುದರಿಂದ, ಪರಸ್ಪರ ಸಹಾನುಭೂತಿ, ಏಕತೆ ಮತ್ತು ಗುಂಪು ಪ್ರಜ್ಞೆ ಬೆಳೆಯಿತು. ಉದ್ಯಮಿಕ ಕ್ರಾಂತಿ ಅನಂತರದ ಬ್ರಿಟಿಷ್ ಕಾರ್ಮಿಕ ಚಳವಳಿಗಳ ಪ್ರಭಾವ ಯೂರೋಪಿನಿಂದ ಬಂದ ಗಣಿಗಾರಿಕೆ ಉಸ್ತುವಾರಿಗಳು ಮತ್ತು ಭಾರತೀಯ ಉಪನ್ಯಾಸಕರು ಹಕ್ಕು ಮತ್ತು ಕರ್ತವ್ಯಗಳ ಬಗೆಗೆ ಚರ್ಚೆಗಳನ್ನು ಪ್ರಾರಂಭಿಸಿದರು. ಇವುಗಳ ಒಟ್ಟಾರೆ ಪರಿಣಾಮವಾಗಿ ಕರ್ನಾಟಕದ ಅತ್ಯಂತ ಪ್ರಾರಂಭಿಕ ಮತ್ತು ಬಲಿಷ್ಠ ಕಾರ್ಮಿಕ ಚಳವಳಿಗಳ ಕೇಂದ್ರವಾಗಿ ರೂಪುಗೊಂಡಿತು.

ಕಾರ್ಮಿಕರು ಅನೌಪಚಾರಿಕವಾಗಿ ಸಹಾಯ ಗುಂಪುಗಳು, ಸಹಾಯ ನಿಧಿಗಳು, ಸುರಕ್ಷತಾ ಸಮಿತಿಗಳು ನಿರ್ಮಿಸಿದರು. ಕಾರ್ಮಿಕರ ಸಾವಿನ ಪ್ರಮಾಣ ಹೆಚ್ಚಾಗುತ್ತಿದ್ದಂತೆ, ಅಪಘಾತ ಪರಿಹಾರ, ವೇತನ ಸರಿಹೊಂದುತ್ತಿಲ್ಲ. ಇವತ್ತನ್ನು ಪ್ರಶ್ನಿಸುವ ಚಟುವಟಿಕೆಗಳು ವೇಗ ಪಡೆದವು. 1920ರ ಅನಂತರ ಅಧಿಕೃತ ಯೂನಿಯನ್‌ಗಳ ನಿರ್ಮಾಣ, ಸಭೆಗಳು, ಪ್ರತಿಭಟನೆಗಳು ಆರಂಭವಾಗಿ; ಭಾರತದ ಸಂಘಟಿತ ಕಾರ್ಮಿಕ ಚಳವಳಿಗಳ ನಕ್ಷೆಯಲ್ಲಿ ಪ್ರಮುಖ ಸ್ಥಾನ ಪಡೆಯಿತು. 20ನೆಯ ಶತಮಾನದ ಆರಂಭದ ಕಾರ್ಮಿಕ ಚಟುವಟಿಕೆಗಳು 1908-1911ರ ನಡುವೆ ವೇತನವೃದ್ಧಿ, ಆರೆ ಆರೋಗ್ಯ ಸೌಲಭ್ಯಗಳಿಗಾಗಿ ಹಲವಾರು ಮುಷ್ಕರಗಳು. 1920ರ ಅನಂತರ ಭಾರತೀಯ ಕಾರ್ಮಿಕ ಸಂಘಗಳ ಪ್ರಭಾವಕ್ಕೆ ತಲುಪಿದಾಗ ಮದ್ರಾಸ್ ಲೇಬರ್ ಯೂನಿಯನ್, ಟ್ರೇಡ್ ಯೂನಿಯನ್ ಕಾಂಗ್ರೆಸ್‌ನಂತಹ ಸಂಘಟನೆಗಳ ಪ್ರಕರಣ ಹೆಚ್ಚಿತು. 1930-40ರ ದಶಕದಲ್ಲಿ ಈ ಎಲ್ಲಾ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಪ್ರಭಾವದಿಂದ ರಾಜಕೀಯ–ಕಾರ್ಮಿಕ ಏಕತೆಯ ಹಾದಿ ಬಲವಾಯಿತು. ಸ್ವಾತಂತ್ರ್ಯೋತ್ತರ ಕಾರ್ಮಿಕ ಹಕ್ಕು ಚಳವಳಿಗಳು ಉದ್ಯೋಗದ ಸುರಕ್ಷತೆ, ಗಣಿಬದುಕಿನ ಹಕ್ಕುಗಳು, ಆರೋಗ್ಯ ಕೇಂದ್ರಗಳ ವಿಸ್ತರಣೆ, ಹೌಸಿಂಗ್ ಕಾಲೋನಿ ಅಭಿವೃದ್ಧಿ ಕುರಿತ ಬೇಡಿಕೆಗಳು. 1990ರ ದಶಕದಲ್ಲಿ ಗಣಿಗಳ ಮುಚ್ಚುವಿಕೆ ಪ್ರಕ್ರಿಯೆ ಆರಂಭವಾದಾಗ ಸ್ಥಳೀಯ ಜೀವನಧಾರಿತ ಸಮುದಾಯಗಳಿಗೆ ಬೃಹತ್ ಹಿನ್ನಡೆಯಾಯಿತು. ಈ ಸಂದರ್ಭದಲ್ಲಿ ಮರು ಉದ್ಯೋಗ ಪ್ಯಾಕೇಜ್ ಚಳವಳಿ, ಪುನರ್ವಸತಿ ಚಳವಳಿಗಳು ಜನರ ಹೋರಾಟದ ಹಿಂದೆಗಳಾಗಿ ಕಾಣಿಸಿಕೊಂಡವು.

**ರೈತ ಚಳವಳಿಗಳು**

ಕೋಲಾರ ಜಿಲ್ಲೆ ತನ್ನ ಸ್ವಾಭಾವಿಕ ಸಂಪನ್ಮೂಲಗಳು, ಹಳ್ಳ ಕೇರಿ ಆಧಾರಿತ ಕೃಷಿ ಆರ್ಥಿಕತೆಯೊಂದಿಗೆ, ಕರ್ನಾಟಕದ ಆರಂಭಿಕ ರೈತ ಚಳವಳಿಗಳಿಗೆ ಪೂರಕವಾದ ನೆಲವಾಗಿದೆ. ಹುಲ್ಲುಹಾಸು ಪ್ರದೇಶ, ಕಡಿಮೆ ಮಳೆಯ ವಲಯ, ಮತ್ತು ಅನಿಶ್ಚಿತ ಮಾರುಕಟ್ಟೆ ವ್ಯವಸ್ಥೆಗಳು ರೈತರಿಗೆ ಶತಮಾನಗಳ ಕಾಲ ಆರ್ಥಿಕ ಸಂಕಟವನ್ನು ತಂದರೂ, ಇದೇ ಪರಿಸ್ಥಿತಿಗಳು ರೈತ ಜಾಗೃತಿ, ಸಂಘಟನೆ ಮತ್ತು ಹೋರಾಟಗಳ ಶಕ್ತಿಯನ್ನೂ ರೂಪಿಸಿವೆ. ಪಶುಸಂಗೋಪನೆ ಮತ್ತು ಹಾಲು ಉತ್ಪಾದನೆಯಲ್ಲಿ ಸ್ಥಾಯಿಯಾಗಿ ಬೆಳೆಯಿತು. 20ನೆಯ ಶತಮಾನದ ಮಧ್ಯಬಾಗದಲ್ಲಿ ಹಾಲಿನ ಮಾರುಕಟ್ಟೆ ಸಂಪೂರ್ಣವಾಗಿ

ಮಧ್ಯವರ್ತಿಗಳ ಹಿಡಿತದಲ್ಲಿತ್ತು. ಹಳ್ಳಿ ದುರಸ್ಥಿಗಳಲ್ಲಿ ರೈತರು ಪಡೆಯುತ್ತಿದ್ದ ದರ ಕಡಿಮೆ, ಸಾಗಣೆ ವೆಚ್ಚ ಹೆಚ್ಚು, ಮತ್ತು ತೂಕ–ಅಳೆವಿಕೆಯಲ್ಲಿ ಅಕ್ರಮ ಸಾಮಾನ್ಯವಾಗಿತ್ತು. ಈ ಪರಿಸ್ಥಿತಿ ಕೆಲವು ಪ್ರಮುಖ ಪರಿವರ್ತನೆಗಳಿಗೆ ದಾರಿ ಮಾಡಿಕೊಟ್ಟಿತು. ಜನಪರ ಡೇಯರಿ ಸಂಘಟನೆಗಳ ಉದಯವು 1960-70ರ ದಶಕದಲ್ಲಿ ಹಾಲನ್ನು ನೇರವಾಗಿ ಮಾರುಕಟ್ಟೆಗೆ ತಲುಪಿಸುವ ವ್ಯವಸ್ಥೆಯ ಕೊರತೆ ರೈತರನ್ನು ಸಂಘಟಿಸಿಕೊಂಡಂತೆ ಮಾಡಿತು. ರೈತರ ಕಷ್ಟಗಳನ್ನು ಪರಿಹರಿಸಲು ಆರಂಭವಾದ ಗ್ರಾಮ ಮಟ್ಟದ ಹಾಲು ಉತ್ಪಾದಕರ ಸಹಕಾರ ಸಂಘಗಳು ಮುಂದಾಗಿ ಈ ಜಿಲ್ಲೆಯು ಅನಂತರ ರಾಜ್ಯ ಮಟ್ಟದ ಸಹಕಾರ ಜಾಲವನ್ನೂ ರಚಿಸಿದವು. ಆಂದೋಲನದ ಮೂಲಕ ಸಹಕಾರ ಎಂಬ ಘೋಷಣೆ ಸಹಕಾರ ಚಳವಳಿಯನ್ನು ಜನಪರಗೊಳಿಸಿತು. ಇದು ಕೇವಲ ಆರ್ಥಿಕ ಹೋರಾಟವಲ್ಲ, ಸ್ವಾಯತ್ತತೆ, ಸ್ವಾವಲಂಬನೆ ಮತ್ತು ರೈತರ ನಿರ್ಧಾರಶಕ್ತಿ ಎಂಬ ಮೌಲ್ಯಗಳನ್ನು ಪೋಷಿಸಿದ ಸಾಮಾಜಿಕ ಚಳವಳಿಯಾಗಿದೆ.

ಕೋಲಾರ ಜಿಲ್ಲೆಯ ಸಂಘಟನೆಗಳು ಅನಂತರ ಹಾಲು ಸಂಗ್ರಹಣೆ, ಶೀತಲಿಕರಣ ಘಟಕಗಳು, ಪಶು ವೈದ್ಯಸೇವೆ, ಮೇವು ಬ್ಯಾಂಕ್‌ಗಳು ಮತ್ತು ತಾಂತ್ರಿಕ ತರಬೇತಿಯನ್ನು ಒಳಗೊಂಡ ನವನವೀನ ಕಾರ್ಯಕ್ರಮಗಳು ರೈತರ ಜೀವನಮಟ್ಟವನ್ನು ಬದಲಾಯಿಸಿದವು. ಕೋಲಾರದಲ್ಲಿ ಮಹಿಳೆಯರು ಹಾಲು ವ್ಯಾಪಾರದಲ್ಲಿ ಪ್ರಮುಖ ಪಾತ್ರವಹಿಸಿದ ಕಾರಣ, ಈ ಚಳವಳಿಯು ಗ್ರಾಮೀಣ ಮಹಿಳಾ ಶಕ್ತೀಕರಣದ ಮಾದರಿಯಾಗಿ ಬೆಳೆಯಿತು. ಹಳ್ಳಿಗಳಲ್ಲಿ ಸಮುದಾಯ ಒಗ್ಗಟ್ಟು, ಗ್ರಾಮ ಸಭೆಗಳು, ಜವಾಬ್ದಾರಿಯುತ ನೇತೃತ್ವವುವು ಬಲಪಟ್ಟವು. ಡೇಯರಿ ಸಂಘಟನೆಗಳು ಅನಂತರ ಗ್ರಾಮಪಂಚಾಯಿತಿ ರಾಜಕೀಯ ಜಾಗೃತಿಗೆ ವೇದಿಕೆಯಾದವು. ಉತ್ಪಾದಕರು ತಮ್ಮ ಹಕ್ಕು-ಜವಾಬ್ದಾರಿಗಳ ಅರಿವು ಪಡೆದರು; ಅನ್ಯಾಯದ ವಿರುದ್ಧ ಹೋರಾಟ ಮಾಡಲು ಸಾಮೂಹಿಕ ಧೈರ್ಯ ಸಾಧಿಸಲಾಯಿತು. ಕೋಲಾರವು ಮಳೆ ಆಧಾರಿತ ಕೃಷಿಗೆ ಅವಲಂಬಿತವಾಗಿರುವ ಕಾರಣ ಭೂಪಡೆ, ನೀರು, ಸಾಮಾನ್ಯ ಸಂಪನ್ಮೂಲಗಳ ಹಂಚಿಕೆ ಅತ್ಯಂತ ರಾಜಕೀಯವಾಗಿತ್ತು. ಇದರಿಂದ ಹಲವು ಸಾಂಸ್ಥಿಕ ಮತ್ತು ಸ್ವಯಂಸ್ಫೂರ್ತ ಚಳವಳಿಗಳು ಇಲ್ಲಿ ಬೆಳೆಯುತ್ತವೆ. ಜಮೀನು ಸಧಾರಣೆ ಹಾಗೂ ಅನ್ಯಾಕ್ರಮಣಗಳ ವಿರುದ್ಧ ಹೋರಾಟವು 1970-90ರ ದಶಕಗಳಲ್ಲಿ ಅನೇಕ ಹಳ್ಳಿಗಳಲ್ಲಿ ಗೋಮಾಳವು ಅನಧಿಕೃತವಾಗಿ ಅತಿದೊಡ್ಡ ಭೂಮಾಲೀಕರ ಕೈಗೆ ಸೇರಿತು. ಬಡಭೂಹೀನ ರೈತರು ಈ ಬಗೆಗೆ ಹೋರಾಟ ನಡೆಸಿ ಜಮೀನು ಮರುಹಂಚಿಕೆಯ ಬೇಡಿಕೆಯನ್ನು ಮುಂದಿಟ್ಟರು. ಜನಪ್ರಿಯ ಸಂಘಟನೆಗಳು ಭೂ ದಾಖಲಾತಿ ಪರಿಶೀಲನೆ, ಗ್ರಾಮ ಸಭೆಗಳು ಪ್ರತಿಭಟನೆಗಳನ್ನು ನಡೆಸಿ ಅನೇಕ ಜಮೀನುಗಳನ್ನು ರೈತರಿಗೆ ಮರುಪಡೆಯಲು ಸಮರ್ಥವಾದವು. ಅನೇಕ ಕೆರೆಗಳು ವೈಯಕ್ತಿಕ ಒತ್ತುವರಿಗಾಗಿ ಖಾಲಿ ಮಾಡಲಾಗುವುದು, ನೀರಿನ ಪ್ರವಾಹವನ್ನು ತಡೆಯಲಾಗುವುದು ಅಥವಾ ಮೇಲೆ ನೀರು ಹೋಗದಂತೆ ಮಾಡಲಾಗುವುದು ಎಂಬ ಆರೋಪಗಳು ಸಾಮಾನ್ಯ. ಇದರಿಂದ

ರೈತರು ಕೇರಿ ಪುನರುಜ್ಜೀವನ, ನೀರಿನ ನ್ಯೈಜ ಹಂಚಿಕೆಗಾಗಿ ಹೋರಾಟ ನಡೆಸಿದರು. ಕೆಲವು ಹಳ್ಳಿಗಳಲ್ಲಿ ಈ ಹೋರಾಟಗಳು ಸತತ ಸಾಮಾಜಿಕ ಚಳವಳಿಗಳಾಗಿ ರೂಪಾಂತರಗೊಂಡವು. ಕೆಲವಡೆ ಮಹಿಳೆಯರು ಮುಂಚೂಣಿಗೆ ಬಂದರು. ಬಡವರಿಗೆ ಗದ್ದೆ ಭೂಮಿಯ ಒದಗಿಕೆಯಾಗಿ ಕೆಲವು ತಾಲ್ಲೂಕುಗಳಲ್ಲಿ ಬಡ ರೈತರು ಮತ್ತು ಭೂಹೀನ ಕುಟುಂಬಗಳಿಗೆ ಸರ್ಕಾರಿ ಭೂಮಿಯ ಹಕ್ಕು ಪತ್ರ, ತಾತ್ಕಾಲಿಕ ಪಟ್ಟು ಪತ್ರ, ಗೃಹಭೂಮಿ ಬೇಡಿಕೆ ಬಲಗೊಂಡಿತು.

ಕೋಲಾರ ಜಿಲ್ಲೆಯ ರೈತ ಚಳವಳಿಯು ವರ್ಗ, ಜಾತಿ, ಲಿಂಗ ಮಿಶ್ರಿತ ಸಾಮೂಹಿಕತೆಯು ಎಲ್ಲಾ ವರ್ಗಗಳ ರೈತರು ಒಂದೇ ವೇದಿಕೆಯಲ್ಲಿರುವುದು. ಶಾಂತಿಯುತ ಮತ್ತು ಮಾತುಕತಾಪರ ಹೋರಾಟಗಳು ಬಹುತೇಕ ಹೋರಾಟಗಳು ಅಹಿಂಸೆ ಆಧಾರಿತವಾಗಿದೆ. ಗ್ರಾಮ ಸಂಘಟನೆಗಳ ಬಲವರ್ಧನೆಯು ಸಂಘಟನೆಗಳು ರಾಜಕೀಯದಿಂದ ಸಾಮಾಜಿಕ ಜಾಗೃತಿಗೆ ಕಾರಣವಾಗಿದೆ. ಆರ್ಥಿಕ ಮತ್ತು ಸಾಂಸ್ಕೃತಿಕ ಪರಿವರ್ತನೆ ಹೋರಾಟಗಳು ಕೇವಲ ಧನದ ಬಗೆಗೆ ಗೌರವ, ಹಕ್ಕು, ಸ್ವಾಭಿಮಾನಗಳ ಬಗೆಗೆ ಕೋಲಾರದಲ್ಲಿ ರೈತ ಚಳವಳಿಗಳು ಕೇವಲ ಕೃಷಿ ಹಿತಾಸಕ್ತಿಗಳ ರಕ್ಷಣೆಗಾಗಿ ನಡೆದ ಹೋರಾಟಗಳಲ್ಲ; ಅವು ಸಾಮಾಜಿಕ ನ್ಯಾಯ, ಸಂಪನ್ಮೂಲಗಳ ಸಮನ್ವಯ ಹಂಚಿಕೆ, ಮಹಿಳಾ ಶಕ್ತೀಕರಣ ಮತ್ತು ಗ್ರಾಮೀಣ ಪ್ರಜಾಪ್ರಭುತ್ವವನ್ನು ಕಟ್ಟಿಕೊಟ್ಟ ಪ್ರಮುಖ ಜನಪರ ಚಳವಳಿಗಳಾಗಿವೆ.

**ದಲಿತ ಚಳವಳಿ**

ಕೋಲಾರ ಜಿಲ್ಲೆಯಲ್ಲಿ ದಲಿತ ಚಳವಳಿಯು 1950ರ ಅನಂತರವೇ ಪ್ರಬಲ ಪಥದಲ್ಲಿ ಬೆಳೆಯಲು ಆರಂಭಿಸಿತು. ಇಲ್ಲಿನ ಸಾಮಾಜಿಕ ವೈಷಮ್ಯ, ವಂಶಾವಳಿ ಭೂಹೀನತೆ ಮತ್ತು ದುಡಿಯುವ ವರ್ಗದ ಶೋಷಣಾ ವ್ಯವಸ್ಥೆಗಳು ವ್ಯಾಪಕವಾಗಿದ್ದವು. ಇದಕ್ಕೆ ಅಂಬೇಡ್ಕರ್ ಅವರ ಚಿಂತನೆ, ಸಂವಿಧಾನಿಕ ಹಕ್ಕುಗಳ ಅರಿವು ಮತ್ತು ಹೊಸ ಶಿಕ್ಷಣ ಸಮೂಹಗಳು ಪ್ರತಿರೋಧಾತ್ಮಕ ಶಕ್ತಿಯನ್ನು ತುಂಬಿದವು. ಇಲ್ಲಿನ ಕೋಲಾರ ಜಿಲ್ಲೆಯ ದಲಿತ ಚಳವಳಿಗಳ ಬೌದ್ಧಿಕ ಬೆನ್ನೆಲುಬು ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ, ಸ್ವಾಭಿಮಾನ, ಶಿಕ್ಷಣ ಮತ್ತು ರಾಜಕೀಯ ಪ್ರತಿನಿಧಿತ್ವದ ಪರಿಕಲ್ಪನೆಯಾಗಿದೆ. ಶಿಕ್ಷಣ, ಸ್ವಾಭಿಮಾನ, ಸಂವಿಧಾನ ಜಾಗೃತಿಯೂ 1950ರ ದಶಕದಿಂದಲೇ ದಲಿತ ಯುವಕರು ಅನುಚ್ಛೇದ 17, 15 ಮತ್ತು 16 46 ಇವುಗಳ ಬಗೆಗೆ ಅರಿವು ಪಡೆಯಲು ಅಂಬೇಡ್ಕರ್ ಹೆಸರಿನಲ್ಲಿ ಸಂಘಗಳು ಮಹತ್ತರ ಪಾತ್ರವಹಿಸಿದವು. ಅಂಬೇಡ್ಕರ್ ಅವರ ಚಿಂತನಾ ವೇದಿಕೆಗಳ ಉದಯವಾಗಿ ಕೋಲಾರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಈ ಸಂಘಟನೆಗಳು ರೂಪುಗೊಂಡುವು. ಅಂಬೇಡ್ಕರ್ ಯುವಕ ಮತ್ತು ಯುವತಿ ತಂಡಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಕ್ಕು ರಕ್ಷಣಾ ವೇದಿಕೆಗಳು, ಬುಡಕಟ್ಟು, ಲಾಂಬಾಣಿ, ನವ ಬೌದ್ಧ ಸಂಘಟನೆಗಳು, ಪಠಣ ಬಳಗಗಳು, ಚರ್ಚಾಗೋಷ್ಠಿಗಳು, ಪ್ರವಚನ ಜಾಗೃತಿ

ಯಾತ್ರೆಗಳು, ಮತ್ತು ಗ್ರಾಮ ಸಭೆಗಳ ಮೂಲಕ ಸಹಜ ಬೌದ್ಧಿಕ ಕ್ರಾಂತಿಯನ್ನು ತರಲು ಸಹಾಯಮಾಡಿದವು. ಇವು ಮಾನವ ಗೌರವದ ಪುನರ್ ಸ್ಥಾಪನೆಯ ಹೋರಾಟಗಳಾಗಿದ್ದವು. ಸಾರ್ವಜನಿಕ ನೀರಿನ ಮೂಲಗಳ ಪ್ರವೇಶ ಹಕ್ಕು 1950–80ರ ದಶಕಗಳಲ್ಲೂ ಅನೇಕ ಹಳ್ಳಿಗಳಲ್ಲಿ ಕೇರೆಯಿಂದ ನೀರು ತೆಗೆದುಕೊಳ್ಳುವ ಹಕ್ಕು, ಪಂಚಾಯತಿ ಬಾವಿಗೆ ಸ್ಪರ್ಶಿಸುವ ಹಕ್ಕು, ಸಾಮೂಹಿಕ ಜಲಸಂಪನ್ಮೂಲಗಳ ಸಮಾನ ಹಂಚಿಕೆ ಇವುಗಳನ್ನು ದಲಿತರಿಗೆ ನಿರಾಕರಿಸುವ ಸಂದರ್ಭಗಳು ಕಂಡುಬಂದವು. ಈ ಅನ್ಯಾಯದ ವಿರುದ್ಧ ದಲಿತ ಯುವಕರು ಮತ್ತು ಮಹಿಳೆಯರು ಸಂಘಟಿಸಿ ನಡೆಸಿದ ಹೋರಾಟಗಳು ಸಾಮಾಜಿಕ ಸಮಾನತೆಯನ್ನು ಪ್ರಾಯೋಗಿಕವಾಗಿ ಸಾಧಿಸಿದವು. ದೇವಾಲಯ ಪ್ರವೇಶ ಚಳವಳಿಯು ಕೋಲಾರ ಜಿಲ್ಲೆಯ ಹಲವು ಭಾಗಗಳಲ್ಲಿ ಹಳ್ಳಿಯ ದೇವಾಲಯಗಳು ದಲಿತರ ಪ್ರವೇಶಕ್ಕೆ ನಿರ್ಬಂಧ ಮಾಡುತ್ತಿವೆ. ಅಂಬೇಡ್ಕರ್ ಸಂಘಟನೆಗಳು ಇದನ್ನು ಮೌಲಿಕ ಹಕ್ಕುಗಳ ಉಲ್ಲಂಘನೆ ಎಂದು ಘೋಷಿಸಿ, ಪ್ರತಿಭಟನೆಗಳು, ಗ್ರಾಮ ಸಭೆಗಳು, ಶಾಂತಿಯುತ ಧರಣಿಗಳು ನಡೆಸಿ ಹಲವು ದೇವಾಲಯಗಳ ಬಾಗಿಲು ದಲಿತರಿಗೆ ತೆರೆಯುವಂತೆ ಮಾಡಿಸಿದವು. ದಲಿತ ಸಂಘರ್ಷ ಸಮಿತಿಯ ಯುವಕ ಮಂಡಳಿಗಳು ಸೂದಿಗಾರರ ಅನ್ಯಾಯ ವಿರೋಧಿಸಿ ಸಹಕಾರಿ ಸಾಲವು ಆರ್ಥಿಕ ಪರ್ಯಾಯ ವ್ಯವಸ್ಥೆಗಳನ್ನು ನಿರ್ಮಿಸಲು ಒತ್ತಾಯಿಸಿದವು. ಗೋಮಾಳದ ಹಂಚಿಕೆ, ಖಾಲಿ–ಬೋಸೊಬ್ಬಿನ ಸರ್ವೆ ಭೂಮಿ, ತಾತ್ಕಾಲಿಕ ಪಟ್ಟು ಪತ್ರ, ಸ್ವಯಂ ಉದ್ಯೋಗ–ಗೃಹಭೂಮಿ ಹಕ್ಕು ಈ ಚಳವಳಿಗಳು ಅನೇಕ ಹಳ್ಳಿಗಳಲ್ಲಿ ಭೂಮಿ ಪಡೆಯುವ ಹಕ್ಕನ್ನು ಸಾಧಿಸಿತು ಮತ್ತು ಗ್ರಾಮೀಣ ಸಾಮರ್ಥ್ಯ ನಿರ್ಮಾಣಕ್ಕೆ ಕಾರಣವಾಯಿತು. ಕೋಲಾರ ಜಿಲ್ಲೆಯ ದಲಿತ ಚಳವಳಿಯು ಅಂಬೇಡ್ಕರ್ ಚಿಂತನಾಧಾರಿತ ಬೌದ್ಧಿಕತೆ ಪ್ರತಿ ಹೋರಾಟವೂ "ಮಾನವ ಗೌರವವೇ ಮೂಲ ಹಕ್ಕು" ಎಂಬ ಅಂಬೇಡ್ಕರ್ ಅವರ ಪರಿಕಲ್ಪನೆ ಆಧಾರಿತವಾಗಿತು.

**ಮಹಿಳಾ ಚಳವಳಿ**

ಕೋಲಾರ ಜಿಲ್ಲೆಯ ಮಹಿಳಾ ಚಳವಳಿಗಳು ಅದರ ಸಾಮಾಜಿಕ ಪರಿವರ್ತನೆ ಪ್ರಕ್ರಿಯೆಯ ಜೀವಂತ ಅಧ್ಯಾಯ. ಬಡತನ, ಗ್ರಾಮೀಣ ನಗರ ಅಸಮಾನತೆ, ಶೈಕ್ಷಣಿಕ ಹಿಂದುಳಿತ, ಗೃಹ ಹಿಂಸೆ, ಮದ್ಯದ ದುರುಪಯೋಗ ಮತ್ತು ಸಾಂಸ್ಕೃತಿಕ ನಿಯಂತ್ರಣಗಳ ನಡುವೆಯೂ ಮಹಿಳೆಯರು ಪ್ರಮುಖವಾಗಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಂಘಟಿತ ಚಲನೆಯನ್ನು ಬೆಳೆಸಿದ್ದಾರೆ. ಆರ್ಥಿಕ ಸಬಲೀಕರಣಕ್ಕೆ 2000ರ ಅನಂತರ ಕೋಲಾರ ಜಿಲ್ಲೆಯಲ್ಲಿ ಮಹಿಳಾ ಸ್ವಸಹಾಯ ಗುಂಪುಗಳು ಬಡತನ ನಿವಾರಣೆ ಮತ್ತು ಮಹಿಳಾ ಸಬಲೀಕರಣದ ಪ್ರಮುಖ ಸಾಧನವಾಗಿ ಬೆಳೆಯುತ್ತವೆ. 'ಸಂತ್ವನ', 'ಸ್ತ್ರೀಶಕ್ತಿ', 'ಮಹಿಳಾ ಸಮೃದ್ಧಿ' ಸೇರಿದಂತೆ ಅನೇಕ ಸ್ವ–ಸಹಾಯ ಗುಂಪುಗಳು

ಗ್ರಾಮೀಣ ಭಾಗದಲ್ಲಿ ಬಲವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಗುಂಪುಗಳು ಆರ್ಥಿಕ ಸ್ವಾವಲಂಬನೆ NABARD ಬ್ಯಾಂಕ್ ಲಿಂಕೇಜ್ ಮೂಲಕ ಸಾಲ ಸೌಲಭ್ಯವನ್ನು, ಬಟ್ಟೆ ನೇಕಾರಿಕೆ, ಹಾಲು ಉತ್ಪಾದನೆ, ಅಗರಬತ್ತಿ ತಯಾರಿ, ಪಿಕಲ್ ಪಾಪಡ್ ಉತ್ಪಾದನೆಂತಹ ಸಣ್ಣ ಉದ್ಯಮಗಳ ಆರಂಭವಾಗಿದೆ. ಕುಟುಂಬ ಸಂಬಂಧಿತವಾಗಿ ಸಾಮಾಜಿಕ ನಿರ್ಧಾರಗಳಲ್ಲಿ ಪಾಲ್ಗೊಳ್ಳುವಿಕೆ ಈ ಗುಂಪುಗಳ ಸದಸ್ಯರು ಮನೆ ಆರ್ಥಿಕತೆ, ಮಕ್ಕಳ ಶಿಕ್ಷಣ, ಮಹಿಳಾ ಆರೋಗ್ಯ ವಿಷಯಗಳಲ್ಲಿ ಜಾಗ್ರತೆ ಮೂಡಿಸಿದರು. ಸಾಲ ಸಾವಕಾರಿ ವ್ಯವಸ್ಥೆಯಿಂದ ಮುಕ್ತಿ ಕಾರ್ಯಕಾರಿ ಬಡ್ಡಿ ದರಗಳ ಮೂಲಕ ಗ್ರಾಮೀಣ ಮಹಿಳೆಯರು ಸಾವಕಾರಿ ಶೋಷಣೆಯಿಂದ ಹೊರಬಂದರು, ಸ್ವಂತ ಹೂಡಿಕೆ ಸಾಮರ್ಥ್ಯ ಹೆಚ್ಚಿತು. ಹೆಣ್ಣುಮಕ್ಕಳ ಶಿಕ್ಷಣ ಮತ್ತು ಸಾಮೂಹಿಕ ಜಾಗೃತಿ SHGಗಳ ಸಹಯೋಗದೊಂದಿಗೆ ಶಾಲಾ ತ್ಯಜನೆ ತಡೆ, ಯೌವನ ಆರೋಗ್ಯ ಜಾಗೃತಿ, ಪೌಷ್ಟಿಕತೆಯ ಅರಿವು ಇವು ಬಲವತ್ತಾಗಿವೆ. ರಾಜಕೀಯ ಭಾಗವಹಿಸುವಿಕೆಯು 1993ರ ಪಂಚಾಯಿತಿ ರಾಜ್ ಕಾಯಿದೆಯು ಜಾರಿಗೆ ಬಂದ ಅನಂತರ ಕೋಲಾರ ಜಿಲ್ಲೆಯ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ರಾಜಕೀಯ ಪ್ರತಿನಿಧಿತ್ವ ಗಣನೀಯವಾಗಿ ಹೆಚ್ಚಿತು. ZP, TP, GPಗಳಲ್ಲಿ ಶೇಕಡಾ 50ರಷ್ಟು ಮೀಸಲಾತಿಯು ಮಹಿಳೆಯರನ್ನು ನಿಜವಾದ ರಾಜಕೀಯ ನಾಯಕತ್ವದತ್ತ ಕೊಂಡೊಯ್ದಿತು. ಆ ಮೂಲಕ ಮದ್ಯವಿಲೇವಾರಿ ಚಳವಳಿಯು ಕೋಲಾರ, ಮಲೂರು, ಮುಳಬಾಗಿಲು ತಾಲ್ಲೂಕುಗಳ ಅನೇಕ ಗ್ರಾಮಗಳಲ್ಲಿ ಮಹಿಳೆಯರು ಅಕ್ರಮ ಮದ್ಯ ಮಾರಾಟ ವಿರೋಧಿಸಿ, ಪೊಲೀಸ್ ಪಂಚಾಯಿತಿ ಸಹಕಾರದೊಂದಿಗೆ ದಂಡನಾತ್ಮಕ ಕ್ರಮಗಳನ್ನು ಪ್ರಾರಂಭಿಸುವ ಮೂಲಕ ಮನೆ ಆರ್ಥಿಕ ಅಸ್ಥಿರತೆ ಪ್ರಶ್ನೆಯನ್ನು ರಾಜಕೀಯ ಅಜೆಂಡಾಗೆ ತಂದರು. ಶೇಕಡಾವಾರು ಶಾಲಾ ಹಾಜರಾತಿ ಹೆಚ್ಚಿಸುವ, ಆಂಗನವಾಡಿ ಪೌಷ್ಟಿಕಾಂಶ ಸುಧಾರಿಸುವ, ಶಿಕ್ಷಕರ ಕೊರತೆ ನಿವಾರಿಸುವ ಕಾರ್ಯಗಳಲ್ಲಿ ನೇರ ಹಸ್ತಕ್ಷೇಪಿಸಿದರು. ಸ್ವಚ್ಛತೆ ನೀರು ಆವರಣ ಚಳವಳಿ ಮನೆ ಶೌಚಾಲಯ ನಿರ್ಮಾಣ, ಶುದ್ಧ ಕುಡಿಯುವ ನೀರಿನ ಯೋಜನೆಗಳ ಜಾರಿಯಲ್ಲಿ ಮಹಿಳಾ ಸದಸ್ಯರ ಪಾತ್ರ ಪ್ರಮುಖವಾಗಿದೆ. ಸಾರ್ವಜನಿಕ ಆರೋಗ್ಯ ಮಾತೃ ಆರೋಗ್ಯ ಸಂತಾನ ಪೋಷಣೆ, ಬಾಲಕ ಬಾಲಕಿಯರ ಲಸಿಕೆ, PDSದ ಧಾನ್ಯ ಗುಣಮಟ್ಟ ಮೇಲ್ವಿಚಾರಣೆ, ಇವುಗಳಲ್ಲಿ ಮಹಿಳಾ ನಾಯಕತ್ವ ಸಕ್ರಿಯವಾಗಿತ್ತು. ಮಹಿಳಾ ಸುರಕ್ಷತೆ ಸಾಮಾಜಿಕ ನ್ಯಾಯ ಚಳವಳಿ ಮಹಿಳಾ ಸಂಘಟನೆಗಳು ಮತ್ತು ಸ್ವಸಹಾಯ ಗುಂಪುಗಳ ಮೂಲಕ ಗೃಹ ಹಿಂಸೆ ವಿರೋಧಿ ಜಾಗೃತಿ ಹೆಣ್ಣು ಮಕ್ಕಳ ಮೇಲಿನ ಹಿಂಸೆ ಶೋಷಣೆಯ ವಿರುದ್ದ ಒಕ್ಕೂಟ ಪೊಲೀಸ್ ದಂಡಾಧಿಕಾರಿಗಳೊಂದಿಗೆ ಸಂವಾದ ಬಾಲ್ಯ ವಿವಾಹ ತಡೆ ಈ ಹೋರಾಟಗಳು ಪರಂಪರೆಯ ಜಾತಿ ಲಿಂಗಾಧಾರಿತ ಶೋಷಣೆಗೆ ವಿರುದ್ಧವಾದ ಸಾಮಾಜಿಕ ನ್ಯಾಯ ಚಳವಳಿಯಾಗಿ ಬೆಳೆಯುತ್ತವೆ.

ಕೋಲಾರ ಜಿಲ್ಲೆಯ ಮಹಿಳೆಯರ ಶಿಕ್ಷಣ ಮಟ್ಟ ಮತ್ತು ಕೌಶಲ್ಯಾಭಿವೃದ್ಧಿಗೆ ಜನಶಿಕ್ಷಣ ನೀತಿ, ಸಾಕ್ಷರತಾ ಅಭಿಯಾನಗಳು, ಕೌಶಲ್ಯಾಭಿವೃದ್ಧಿ ತರಬೇತಿಗಳು Tailoring, Beautician Course, Dairy

Management, Computer Literacy ಉದ್ಯೋಗ ಮೇಳಗಳು, ಮಹಿಳಾ ವಿಶೇಷ ಭಾಗಗಳು ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಮಹಿಳೆಯರ ಸಾಮಾಜಿಕ ದೃಶ್ಯಮಾನತೆಯನ್ನು ಹೆಚ್ಚಿಸಿವೆ. ಕುಟುಂಬದ ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತಿ ಸುಧಾರಣೆ ಮಹಿಳೆಯರು ಆರ್ಥಿಕವಾಗಿ ಬಲವಾದಂತೆಯೇ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಹೂಡಿಕೆ ಆರೋಗ್ಯಕ್ಕೆ ಹೆಚ್ಚಿನ ಶ್ರಮ ಮನೆ ಸಮಾಜದ ನಿರ್ಧಾರಗಳಲ್ಲಿ ಹೆಚ್ಚಿನ ಭಾಗವಹಿಸುವಿಕೆ, ಲಿಂಗ ಸಮಾನತೆಯತ್ತ ಚಲನೆ ಪಾರಂಪರಿಕ ಗೃಹಪರ ಮಹಿಳಾ ಪಾತ್ರದಲ್ಲಿ ಬದಲಾವಣೆ ಕಂಡುಬಂತು. ಗ್ರಾಮೀಣ ಸಮಾಜದ ರಾಜಕೀಯ ಜನತಂತ್ರ ಬಲವರ್ಧನೆ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರು, ಪಾರದರ್ಶಕ ಆಡಳಿತ, ಭ್ರಷ್ಟಾಚಾರ ವಿರೋಧ, ಸಾರ್ವಜನಿಕ ಯೋಜನೆಗಳ ನಿಗಾವಹಣೆ ನಡೆಸುವ ಮೂಲಕ ಜನತಂತ್ರವನ್ನು ಬಲಪಡಿಸಿದರು. ಮಹಿಳಾ ಯುವ ಮಹಿಳಾ ಐಕ್ಯತೆ SHGಗಳು ಮತ್ತು ಮಹಿಳಾ ವೇದಿಕೆಗಳು ಯುವತಿಯರಲ್ಲಿ ಆತ್ಮವಿಶ್ವಾಸ ಹಕ್ಕು ಅರಿವು ನಾಯಕತ್ವ ಇವುಗಳನ್ನು ಬೆಳೆಸಿದವು. ಕೋಲಾರ ಜಿಲ್ಲೆಯ ಮಹಿಳಾ ಚಳವಳಿಗಳು ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣದ ಅನೇಕ ಹಂತಗಳನ್ನು ದಾಟಿಕೊಂಡು, ಜಿಲ್ಲಾ ಮಟ್ಟದ ಪ್ರಗತಿಪರ ಸಾಮಾಜಿಕ ಪರಿವರ್ತನೆಗೆ ಕೇಂದ್ರ ಶಕ್ತಿಯಾಗಿ ರೂಪುಗೊಂಡಿವೆ. SHG ಮಾದರಿ, ರಾಜಕೀಯ ಮೀಸಲಾತಿ, ಶಿಕ್ಷಣ, ಆರೋಗ್ಯ ಹೋರಾಟಗಳು, ಮದ್ಯವಿಲೇವಾರಿ ಚಳವಳಿ ಮತ್ತು ಮಹಿಳಾ ಸುರಕ್ಷತಾ ಅಭಿಯಾನಗಳು ಜಿಲ್ಲೆಯಲ್ಲಿ ಮಹಿಳೆಯರನ್ನು ಸಮಾಜ ನಿರ್ಮಾಣದ ಸಕ್ರಿಯ ಭಾಗವಾಗಿ ರೂಪಿಸಿವೆ.

ಒಟ್ಟಾರೆಯಾಗಿ; ಕೋಲಾರ ಜಿಲ್ಲೆಯ ಜನಪರ ಚಳವಳಿಗಳು ಪ್ರಧಾನವಾಗಿ ಸಮುದಾಯ ಬಲ, ಮೌನ, ಸಹಜ ಪ್ರತಿರೋಧ, ಸಂಘಟನೆ, ಸಹಕಾರ ಶಕ್ತಿ, ಜನಪ್ರಿಯ ನ್ಯಾಯಬುದ್ಧಿ, ಮಾನವೀಯತೆ ಮತ್ತು ಸಮಾನತೆಗೆ ನಿಷ್ಠೆ ಎಂಬ ಗುಣಗಳಾಗಿರುವ ಜೀವಂತ ಸಾಮಾಜಿಕ ದಾಖಲೆಯಾಗಿದೆ. ಕರ್ನಾಟಕದ ಜನಪರ ಚಳವಳಿಯ ನಕ್ಷೆಗೆ ಹೊಸ ಅಂಶಗಳನ್ನು ಸೇರಿಸಿದೆ. ರಾಜ್ಯದ ಸಾಮಾಜಿಕ ರೂಪಾಂತರ ಪ್ರಕ್ರಿಯೆಗೆ ತನ್ನದೇ ಆದ ಅದ್ವಿತೀಯ ಕೊಡುಗೆ ನೀಡಿದೆ ಮತ್ತು ಸಾಮಾಜಿಕ ಪ್ರಜಾಸತ್ತಾತ್ಮಕ ಮೌಲ್ಯಗಳ ಅಭಿವೃದ್ಧಿಗೆ ಸಕ್ರಿಯವಾಗಿ ಪಾಲ್ಗೊಂಡಿದೆ.

## ಆಧಾರ ಗ್ರಂಥಗಳು


1. ಮ.ಚಿ.ನಾಗರಾಜಯ್ಯ, ಕರ್ನಾಟಕದ ಸಾಮಾಜಿಕ ಚಳವಳಿಗಳು–2007
2. ಭಾರತೀಶ್ ಹಿರೇಮಠ, ಕರ್ನಾಟಕದ ರೈತ ಹೋರಾಟಗಳು–2005
3. ಮಾರಿಕುಂಟೆ, ರಾಘವೇಂದ್ರ, ಹಾಲು ಚಳವಳಿ ಮತ್ತು ಸಹಕಾರ ಮಾದರಿ–2011
4. ಮ.ಚಿ.ನಾಗರಾಜಯ್ಯ, ದಲಿತ ಸಾಹಿತ್ಯ ಮತ್ತು ಚಳವಳಿ ಚರಿತ್ರೆ–2008
5. ಗೌರಿ ಲಂಕೇಶ್, ಭಾಷಾ ಹೋರಾಟಗಳು–ಕನ್ನಡದ ಹಾದಿ–2004
6. ಬಸವರಾಜಪ್ಪ.ಎಚ್, ಗ್ರಾಮೀಣ ಮಹಿಳಾ ಸಬಲೀಕರಣ ಅಧ್ಯಯನ–2005
7. ಪೋಲಿಸ್ ದೌರ್ಜನ್ಯ ವಿರೋಧ ಹೋರಾಟ–ಸ್ಥಳೀಯ ದಾಖಲೆಗಳು, ಕೋಲಾರ